ಶ್ರೀ ಟಿ.ಬಿ. ಜಯಚಂದ್ರ : ಸಭಾಧ್ಯಕ್ಷಿಣಿಯವರೇ, ನಾವು 3 ಜನ ಸೇರಿ ಪ್ರಶ್ನೆ ಹಾಕಿದ್ದರೂ ಸ್ಪಷ್ಟವಾದಂತ ಉತ್ತರ ಬರಲಿಲ್ಲ. ಒಂದು ಉತ್ತರ ಏನು ಅಂದರೆ,ನಮಗೆ ಕ್ಲಾರಿಫಿಕೇಶನ್ ಬೇಕು. ಏಕೆಂದರೆ ಇದು ರಾಜ್ಯದ ಎಲ್ಲಾ ಜನರಿಗೂ ಗೊತ್ತಾಗಬೇಕಾಗಿದೆ. ಈಗ ಎಲ್ಲಾ ಶಾಸಕರು ಕೂಡ ಸಮಿತಿ ಸದಸ್ಯರಾಗಿರುತ್ತಾರೆ. 3 ನೂರು ಎಕರೆ ಜಮೀನನ್ನು ಹಂಚತಕ್ಕಂಥ ಸಂದರ್ಭದಲ್ಲಿ, 80 ಎಕರೆ ಮಾತ್ರ ನಾವು ಕೊಡಬಹುದು. ಇನ್ನು 20 ಎಕರೆ ಕೊಡುವುದಕ್ಕೆ ಬರುವುದಿಲ್ಲ. ಅರ್ಜಿಗಳನ್ನು ಹಾಕಿರುವುದಿಲ್ಲ. ಅವರು ಸಾಗುವಳಿ ಮಾಡುತ್ತಿದ್ದಾರೆ. ಈಗ ಅವರನ್ನು ಒಕ್ಕಲು ಎಬ್ಬಿಸುವುದಕ್ಕೆ ಸಾಧ್ಯವೇ? ಅದು ಸಾಧ್ಯವಿಲ್ಲ, ಮಾನವೀಯತೆ ದೃಷ್ಟಿಯಿಂದ ನೀವು ಮಾಡಲ್ಲ, ಯಾರೂ ಮಾಡುವುದಿಲ್ಲ. ಇಂಥ ಸಂದರ್ಭದಲ್ಲಿ ಅವರಿಗೆ ಯಾವ ರೀತಿಯಾದ ಪರಿಹಾರವನ್ನು ನೀವು ಕೊಡುತ್ತೀರಿ ಎನ್ನತಕ್ಕದ್ದು ಒಂದು ಪ್ರಶ್ನೆ. ಅವರಿಗೆ ಏನಾದರೂ ಮಾಡಬೇಕು, ವಿಶೇಷವಾಗಿ ಇದೇ ಕಮೀಟಿಗೆ ಏನಾದರೂ ವಿಶೇಷವಾದ ಆಜ್ಞೆಯನ್ನು ಕೊಟ್ಟು ಅಥವಾ ಪವರ್ಸ್‌ನ್ನು ಕೊಟ್ಟು, ಈ ಕೆಲಸ ಮಾಡುವುದಕ್ಕೆ ಸಾಧ್ಯವೇ? ಅದರ ಬಗ್ಗೆ ಏಕೆ ಯೋಚನೆ ಮಾಡಬಾರದು ಎಂದು ಎನ್ನತಕ್ಕಂತದ್ದು ಮತ್ತು ಹತ್ತಾರು ವರ್ಷಗಳಿಂದ 20-30 ವರ್ಷಗಳಿಂದ ನಮ್ಮಲ್ಲಿ ತೆಂಗು ಬೆಳೆಯುತ್ತಾ ಇರತಕ್ಕಂತವರು 30-40 ವರ್ಷಗಳಿಂದ ತೆಂಗಿನ ಪಸಲು ತಿನ್ನುತ್ತಾ ಇದ್ದಾರೆ. ಅವರಿಂದ ಸರ್ಕಾರಕ್ಕೆ ಯಾವ ರೀತಿಯಾದ ವರಮಾನವೂ ಇಲ್ಲ, ಒಂದು ಕಂದಾಯವನ್ನೂ ಕಟ್ಟುವುದಿಲ್ಲ ಇವತ್ತು ಅವರನ್ನು ಎವಿಕ್ಷನ್ ಮಾಡುವುದಕ್ಕೆ ನಿಮ್ಮ ಪ್ರೊಸಿಡಿಂಗ್ಸ್‌ನಲ್ಲಿ ಅವಕಾಶ ಇದೆ. ನಿಮ್ಮ ಲ್ಯಾಂಡ್ ರೆವಿನ್ಯೂ ಆಕ್ಟ್ ಪ್ರಕಾರ ಒಂದು ನೋಟಿಸ್ ಕೊಟ್ಟು ಬಿಟ್ಟರೆ ಹೈಕೋರ್ಟ್‌ಗೆ ಹೋಗಿ ಸ್ಟೇ ಮಾಡಿಸುತ್ತಾರೆ. 10 ವರ್ಷಗಳಾದರೂ ಅದು ಇತ್ಯರ್ಥವಾಗುವುದಿಲ್ಲ. ಇದರಿಂದ ಪ್ರಯೋಜನ ಏನಾಯಿತು. ಅವನ್ನು ಆಫ್ ಸೆಟ್ ಪ್ರೈಸ್‌ಗೆ ಕೊಡೊ ಮಟ್ಟಕ್ಕೆ ಏಕೆ ಯೋಚನೆ ಮಾಡಬಾರದು ರೆವಿನ್ಯೂ ಲ್ಯಾಂಡ್ ಕೇಳುತ್ತಿರುವುದು, ಫಾರೆಸ್ಟ್ ಲ್ಯಾಂಡ್ ಅಲ್ಲ.

Sri. M. Raja shakar Murthi : This will be examined.

ಉಪಾಧ್ಯಕ್ಷಿಣಿಯವರು : ಪ್ರಶ್ನೆ 173 (429)ಕ್ಕೆ ಉತ್ತರವನ್ನು ರೂರಲ್ ಡೆವಲಪ್ ಮೆಂಟ್ ಮಂತ್ರಿಗಳು ಕೊಡಬೇಕಾಗಿದೆ. ಅವರಿಗೆ ಇದು ಟ್ರಾನ್ಸ್ ಫರ್ ಆಗಿದೆ. ಮುಂದೆ ತೆಗೆದುಕೊಳ್ಳುತ್ತೇವೆ.

Sub Grants given Temples for Repairs/Renovations.

174 Sir. Peraikal M. Mallappa (Chikpet): Will the Hon'ble Minister for Revenue be pleased to State.

A) The names of the temple in Bangalore City given grants for repairs / renovation Bangalore City curing 1991-92 and 92-93 (up to the end of October 92)

B) The amount of grant given to each Temple.

M. Rajashakara Murthy (Revenue Minister):

1. Sri. Durgaparameshwari temple Jayanagar, 7th Block Bangalore	Rs.25,000-00
2. Sri. Vinayaka Venkataramana Temple, Railway Colony Banglaore	Rs. 10,000-00
3. Sri. Vidyaganapathi Temple Hosvagaor extensions Bangalore.	Rs. 20,000-00
4. Sri. Kodanda Ramaswamy temple Egipura, Bangalore	Rs. 20,000-00
5. Sri, Doddamma & Magadamma Koramangala Bangalore	Rs 20,000-00
6. Sri. Doddamma & Mugadamma Sri. Bhuwane shwari, Kannada Yuvaka Sangha Koramangala, Bangalore.	Rs 15,000-00
7. Sri. Balasubramanyaswamy Temple, T.C.M Rayan Road, Bangalore.	Rs. 10,000-00
Total	Rs. 1,20,000-00

1992-93

1. Sri. Solur Thimmarayappa Pharmachatra, Magadi Main Road, Bangalore	Rs. 20,000-00
2. Sri. Navagraha & Ashwatha Katte 9th Block, Jayanagar, Bangalore.	Rs. 15,000-00
	Rs. 35,000-00

Replied in "A"

ಶ್ರೀ ಪೆರಿಕಲ್ ಎಂ. ಮಲ್ಲಪ್ಪ : ಸನ್ಮಾನ್ಯ ಅಧ್ಯಕ್ಷಿಣಿಯವರೇ, ಬೆಂಗಳೂರು ಮಹಾನಗರದಲ್ಲಿ 260 ದೇವಸ್ಥಾನಗಳು ಇದ್ದು ಅವು ಕಂದಾಯ ಇಲಾಖೆಯ ಮುಜರಾಯಿಗೆ ಬರುತ್ತವೆ. 91-92ನೇ ಸಾಲಿನಲ್ಲಿ ಕೇವಲ ಒಂದು ಲಕ್ಷದ ಇಪ್ಪತ್ತು ಸಾವಿರ ರೂಪಾಯಿಗಳನ್ನು ಬೆಂಗಳೂರಿನ 260 ದೇವಸ್ಥಾನಗಳಿಗೆ ನೀಡಿದೆ. ಕೆಲವು ದೇವಸ್ಥಾನಗಳನ್ನು ಐನೂರು ಆರುನೂರು ವರ್ಷಗಳಾಗಿವೆ. ಕೆಲವು ದೇವಸ್ಥಾನಗಳಲ್ಲಿ ಕುಡಿಯಲು ನೀರಿನ ಕೊಳಾಯಿ ಕೂಡ ಇಲ್ಲ. ಅಷ್ಟು ಅವ್ಯವಸ್ಥೆ ಇಲ್ಲಿದೆ. ಈ ದೇವಸ್ಥಾನಗಳನ್ನೂ ದುರಸ್ತಿ ಮಾಡಬೇಕಾಗುತ್ತದೆ. ಅದಕ್ಕೆ ಸರ್ಕಾದವರು ಹಣವನ್ನು ಇನ್ನೂ ಹೆಚ್ಚಾಗಿ ಕೊಡಬೇಕಾಗುತ್ತದೆ. 10 ಸಾವಿರದಿಂದ 20 ಸಾವಿರ ರೂಪಾಯಿ ಕೊಟ್ಟರೆ ಅದು ಸುಣ್ಣ ಬಣ್ಣ ಬಳಿಯುವುದಕ್ಕೆ ಕೂಡ ಆಗುವುದಿಲ್ಲ. ಆರ್ಕೆಯಲಾಜಿಕಲ್ ಡಿಪಾರ್ಟ್‌ಮೆಂಟ್‌ನವರು ಈ ದೇವಸ್ಥಾನಗಳನ್ನು ಪ್ರಿಸರ್ವ ಮಾಡಬೇಕಾಗುತ್ತದೆ. ಏಕೆಂದರೆ ಇವುಗಳಿಗೆ ನಾನೂರು ಐನೂರು ವರ್ಷಗಳ ಮೇಲೆ ಆಗಿದೆ. ಆದ್ದರಿಂದ 1992-93ನೇ ಸಾಲಿನಲ್ಲಿ ಕೇವಲ 35 ಸಾವಿರ ರೂಪಾಯಿ ಖರ್ಚು ಮಾಡಿದ್ದೀರಿ. ಇನ್ನೊರು ಮುನ್ನೂರು ದೇವಸ್ಥಾನಗಳು ಬೆಂಗಳೂರಿನಲ್ಲಿ ಇದ್ದು ಅದಕ್ಕೆ ಕೇವಲ 35 ಸಾವಿರ ರೂಪಾಯಿಗಳನ್ನು ಮಾತ್ರ

ಖರ್ಚು ಮಾಡಿದ್ದರೆ ಯಾವ ದೇವಸ್ಥಾನಕ್ಕೆ ಏನು ಮಾಡುವುದಕ್ಕಾಗುತ್ತದೆ? ದಯಮಾಡಿಕಂದಾಯ ಮಂತ್ರಿಗಳು ಇದರ ಬಗ್ಗೆ ಸ್ವಲ್ಪ ಯೋಚನೆ ಮಾಡಿ ದೇವಸ್ಥಾನಕ್ಕೆ ಜಾಸ್ತಿ ದುಡ್ಡು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

Sri M. Rajashekhara Murthy : His request would be considered.

ನಿಯಂತ್ರಿತ ಮಾರುಕಟ್ಟೆಯಲ್ಲಿ ದಲ್ಲಾಳಿಯನ್ನು ಕಾನೂನು ಬಾಹಿರವಾಗಿ ವಸೂಲಿ ಮಾಡುವುದು.

478 - ಶ್ರೀ ಡಿ.ಆರ್. ಪಾಟೀಲ್ (ಗದಗ) : ಮಾನ್ಯ ಸಹಾಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ನಿಯಂತ್ರಿತ ಮಾರುಕಟ್ಟೆಯಲ್ಲಿ ರೈತರಿಂದ ದಲಾಲಿ ವಸೂಲಿ ಮಾಡಬಾರದೆಂದು ಕಾನೂನು ಮಾಡಲಾಗಿದ್ದರೂ ರೈತರಿಂದ ಅಕ್ರಮವಾಗಿ ದಲಾಲಿ ವಸೂಲಿ ಮಾಡುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ.

ಆ) ಹಾಗಿದ್ದಲ್ಲಿ ರೈತರಿಂದ ಅಕ್ರಮ ದಲಾಲಿ ವಸೂಲಿ ನಿಲ್ಲಿಸಲು ಸರ್ಕಾರವು ಕೈಗೊಳ್ಳುವ ಕ್ರಮಗಳೇನು?

ಇ) ನಿಯಂತ್ರಿತ ಮಾರುಕಟ್ಟೆಯಲ್ಲಿ ರೈತರ ಮಾಲು ಮಾರಾಟವಾದ ನಂತರ ಹಣಪಾವತಿಯಲ್ಲಿ ಬಹಳ ವಿಳಂಬ ಮಾಡುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ

ಈ) ಹಾಗಿದ್ದಲ್ಲಿ, ರೈತರಿಗೆ ಮಾಲು ಮಾರಾಟವಾದ ತಕ್ಷಣ ಅವರ ಹಣ ಪಾವತಿ ಮಾಡುವಂತೆ ಸರ್ಕಾರ ಯಾವ ಕ್ರಮ ಕೈಗೊಳ್ಳಲಾಗುವುದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಸಹಕಾರ ಸಚಿವರು)

ಅ) ಬಂದಿದೆ

ಆ) 1966ರ ಕೃಷಿ ಉತ್ಪನ್ನ ಮಾರಾಟ(ನಿಯಂತ್ರಣ) ಕಾಯ್ದೆ ಅಡಿಯಲ್ಲಿ ಮಾರಾಟಗಾರರಿಂದ ದಲ್ಲಾಲಿ ವಸೂಲು ಮಾಡಲು ನಿರ್ಬಂಧ ಇರುವ ಬಗ್ಗೆ ರೈತರಲ್ಲಿ ಅರಿವು ಮೂಡಿಸಲು ಮಾರುಕಟ್ಟೆ ಸಮಿತಿಗಳು ಕರಪತ್ರಗಳ ಮೂಲಕ, ಪೋಸ್ಟರುಗಳ ಮೂಲಕ ಧ್ವನಿವರ್ದಕಗಳ ಮೂಲಕ ಮಾರುಕಟ್ಟೆ ಪ್ರಾಂಗಣಗಳಲ್ಲಿ ಹೋರ್ಡಿಂಗ್‌ಗಳನ್ನು ಸ್ಥಾಪಿಸುವ ಮೂಲಕ ವ್ಯಾಪಕ ಪ್ರಚಾರ ಕೈಗೊಂಡಿದೆ. ಆಕಾಶವಾಣಿ ಸಹಯೋಗದೊಂದಿಗೆ ಬಾನುಲಿ ಪಾಠಗಳನ್ನು ನಡೆಸಲಾಗುತ್ತಿದೆ. ಕಾನೂನು ಬಾಹಿರವಾಗಿ ದಲ್ಲಾಲಿಯನ್ನು ಪಡೆದ ಪ್ರಕರಣಗಳು ಕಂಡು ಬಂದಲ್ಲಿ ತಪ್ಪಿತಸ್ಥ ದಲ್ಲಾಲಿ ವ್ಯಾಪಾರಿಗಳ ಲೈಸನ್ಸ್ ರದ್ದು ಮಾಡಲು ಹಾಗೂ ನ್ಯಾಯಾಲಯದಲ್ಲಿ ಮೊಕದ್ದಮೆ ಹೂಡಲು ಮಾರುಕಟ್ಟೆ ಸಮಿತಿಗಳಿಗೆ ಅಧಿಕಾರವಿದೆ.

ಇ) ಇಂತ ಕೆಲವು ಪ್ರಕರಣಗಳು ಗಮನಕ್ಕೆ ಬಂದಿರುತ್ತದೆ.

ಈ) ಸಕಾಲದಲ್ಲಿ ದಲ್ಲಾಲಿಗಳು ಹಣ ಪಾವತಿ ಮಾಡದಿದ್ದ ಪಕ್ಷದಲ್ಲಿ ಅಂತಹವರ ಲೈಸನ್ಸ್‌ನ್ನು ಅಮಾನತ್ತು ರದ್ದುಗೊಳಿಸಲು ಕಾಯ್ದೆಯಲ್ಲಿ ಅವಕಾಶ ಇದೆ. ಇದಲ್ಲದೆ. ಇಂತಹ ಪ್ರಕರಣಗಳಲ್ಲಿ ದಲ್ಲಾಲಿಗಳು: ವರ್ತಕರು ಮಾರುಕಟ್ಟೆ ಸಮಿತಿಯಲ್ಲಿ ನೀಡಿರುವ ಭದ್ರತಾ ಠೇವಣಿಯನ್ನು ಮುಟ್ಟುಗೋಲು ಹಾಕಿಕೊಂಡು ಆ ಹಣವನ್ನು ರೈತ ಮಾರಾಟಗಾರರಿಗೆ ಕೃಷಿ ಉತ್ಪನ್ನ ಹಣವನ್ನು ಪಾವತಿಸಲು ಕಾಯ್ದೆಯಲ್ಲಿ ಅವಕಾಶ ಇದೆ.ಹಾಗೂ ಸಮಿತಿಯ ಅಧ್ಯಕ್ಷರುಗಳು ಇಂತಹ